# ಕಲ್ಪನೆ



ಶ್ರಮಜೀವನದ ನೋವು ನಲಿವು ಬಲ್ಲವರೇ ಬಲ್ಲರು. ದಣಿವಿನ ಜೊತೆಗೆ ಮನದೊಳಗೆ ಸೇರಿಕೊಳ್ಳುವ ಬೇಸರವೂ, ಕಿಂಚಿತ್ ಯಶಸ್ಸಿಗೂ ಉಕ್ಕಿ ಬರುವ ಮುದವೂ, ಒಬ್ಬೊಬ್ಬರ ಅನುಭವ ಒಂದೊಂದು ರೀತಿ. ಬಹುಶಃ ತನ್ನ ಬದುಕಿಗೆ ಆಸರೆಯಾಗಿರುವ ಜಾನುವಾರಿಗೆ ಈ ಹಸಿರು ಹುಲ್ಲು ಹೊತ್ತೊಯ್ಯುವ ಮಹಿಳೆಯ ಮುಖದಲ್ಲಿರುವ ತಲ್ಲೀನತೆಯಲ್ಲಿ ಕಾವ್ಯದ ಸಾಲುಗಳು ಅಡಗಿವೆಯೇ? ಬೆನ್ನಿಗೆ ಅಂಟಿದ ಹಸಿರುಹೊಲಗಳ ಸಿರಿ, ಸೂರ್ಯನು ಆಗಸಕ್ಕೆ ಚೆಲ್ಲಿದ ಚಿನ್ನದ ಬಣ್ಣ ನಿಮ್ಮ ಮನದಲ್ಲಿ ಕವಿತೆಯೊಂದನ್ನು ಹೊಳೆಯಿಸಿತೆ?
ನಿಮ್ಮ ಕಲ್ಪನೆಯ ಕವಿತೆಯನ್ನು ಕಳುಹಿಸಿ ಕೊಡಲು ಕೊನೆಯ ದಿನಾಂಕ ಏಪ್ರಿಲ್ 15.

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in